ಕ್ರ. ಸಂ	ಉಪನಗರಗಳ ಸ್ಥಳಗಳು	ಖಾಸಗಿ ಜಮೀನು	ಸರ್ಕಾರಿ ಜಮೀನು	ಮೊತ್ತ
1	ನಂದಗುಡಿ (ಹೊಸಕೋಟೆ ತಾಲ್ಲೂಕು)	13762	4745	18507
2	ರಾಮನಗರ (ರಾಮನಗರ ತಾಲ್ಲೂಕು)	3621	392	4013
3	ಬಿಡದಿ (ರಾಮನಗರ ತಾಲ್ಲೂಕು)	6959	2725	9684
4	ಸೋಲೂರು (ಮಾಗಡಿ ತಾಲ್ಲೂಕು)	9661	2864	12525
5	ಸಾತನೂರು (ಕನಕಪುರ ತಾಲ್ಲೂಕು)	5891	10341	16232
	ಒಟ್ಟು	**39894**	**21067**	**60961**

ಇ) 5 ಟೌನ್ ಶಿಪ್‌ಗಳ ಪೈಕಿ ಬಿಡದಿ ಟೌನ್ ಶಿಪ್‌ನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಭೂಮಿಯನ್ನು ಸ್ವಾಧೀನಪಡಿಸಲು ಉದ್ದೇಶಿಸಿದ್ದು, ಭೂಮಿಯ ಮೋಜಣಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಈ ಕಾರ್ಯ ಪೂರ್ಣಗೊಂಡ ನಂತರ ಕೃಷಿ ಹಾಗೂ ಕೃಷಿಯೇತರ ಭೂಮಿಯ ವಿಸ್ತೀರ್ಣವನ್ನು ದೃಢೀಕರಿಸಲಾಗುವುದು

ಈ) ಪುನರ್ವಸತಿ ಸೌಕರ್ಯದ ಬಗ್ಗೆ ಸಂಬಂಧಪಟ್ಟ ಭೂ ಮಾಲೀಕರೊಂದಿಗೆ ಚರ್ಚಿಸಿ, ಪುನರ್ವಸತಿ ಸೌಕರ್ಯದ ಪ್ಯಾಕೇಜನ್ನು ಅಂತಿಮ ಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ

864(746) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಪ್ರಾಯೋಜಿತ ಜೆ ಎನ್ ಯು ಆರ್ ಎಂ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಅನುಷ್ಠಾನಗೊಳಿಸುತ್ತಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ಮೊತ್ತ ಎಷ್ಟು ಹಾಗೂ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು,

ಇ) ಈ ಯೋಜನೆಯನ್ವಯ ಪ್ರಮುಖವಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳೇನು ಹಾಗೂ ಈ ಬಗ್ಗೆ ಕಾರ್ಯಯೋಜನೆಯನ್ನು ಸಿದ್ಧ ಪಡಿಸಲಾಗಿದೆಯೇ,

ಈ) ಹಾಗಿದ್ದಲ್ಲಿ, ಈ ವರ್ಷದಲ್ಲಿ ಅನುಷ್ಠಾನಗೊಳಿಸಲಿರುವ ಕಾರ್ಯ ಕ್ರಮಗಳೇನು,

ಉ) ಅವುಗಳನ್ನು ಯಾವಾಗ ಆರಂಭಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಜೆ ಎನ್ ಎನ್ ಯು ಆರ್ ಎಂ ಯೋಜನೆಯಡಿ ಒಟ್ಟು ರೂ 1492 05 ಕೋಟಿ ಅಂದಾಜು ಮೊತ್ತದಲ್ಲಿ 25 ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದ್ದು, ಈ ಪೈಕಿ 13 ಯೋಜನೆಗಳು ಅನುಮೋದನೆ ಯಾಗಿರುತ್ತವೆ ಈ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ರೂ 93 44 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ ರಾಜ್ಯದ ಪಾಲು ರೂ 30 60 ಕೋಟಿಗಳು ಸೇರಿ ಒಟ್ಟಾರೆ ರೂ 124 04 ಕೋಟಿಗಳನ್ನು ಪ್ರಥಮ ಕಂತಾಗಿ ಬಿಡುಗಡೆ ಮಾಡಲಾಗಿದೆ

ಇ) ಈ ಯೋಜನೆಯಡಿಯಲ್ಲಿ ಪ್ರಮುಖವಾಗಿ ಮಳೆ ನೀರಿನ ಚರಂಡಿ ದುರಸ್ತಿ/ನಿರ್ಮಾಣ, ಸಾರಿಗೆ ದಟ್ಟಣೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕೆಳ ಸೇತುವೆ/ಮೇಲು ಸೇತುವೆ/ಸುರಂಗ ಮಾರ್ಗಗಳ ನಿರ್ಮಾಣ, ಬಸ್ ಡಿಪೋಗಳ ನಿರ್ಮಾಣ, ವರ್ತುಲ ರಸ್ತೆಗಳ ನಿರ್ಮಾಣ ಮತ್ತು ನೀರು ನರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ಸುಧಾರಣೆ ಹಾಗೂ ನಗರದ ಬಡಜನರಿಗೆ ವಸತಿ ಹಾಗೂ ಇತರೆ ಮೂಲ ಸೌಕರ್ಯಗಳ ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಲಾಗಿದ್ದು ಆಯಾ ಅನುಷ್ಠಾನ ಸಂಸ್ಥೆಗಳು ಕಾರ್ಯ ಯೋಜನೆಯನ್ನು ಸಿದ್ದವಡಿಸಿದ್ದು ಕೆಲವು ಯೋಜನೆಗಳು ತಯಾರಿಕೆ ಹಂತದಲ್ಲಿದೆ

ಈ) ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುವ 13 ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ

ಉ) ಅನುಮೋದನೆಯಾಗಿರುವ 13 ಯೋಜನೆಗಳ ಪೈಕಿ 7 ಯೋಜನೆಗಳ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿರುತ್ತದೆ

867(895) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರದಲ್ಲಿ ಅಪೆರಲ್ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿರುವುದು ನಿಜವೆ,